

ಈಕೆ ರೀಮಾ ಫಾಖಿ. ಮಿಸ್ ಅಮೆರಿಕ. ಕಿರೀಟ ಧರಿಸಿದ ಕೂಡಲೇ ಮೂರು ವರ್ಷಗಳ ಹಿಂದೆ ವೆಬ್‌ಸೈಟ್ ಒಂದರಲ್ಲಿ ಬಿದ್ದಿದ್ದ ಈ ಚಿತ್ರ ಎಲ್ಲಾ ಕಡೆ ಸುತ್ತಲಾರಂಭಿಸಿದೆ. 2007ರ 'ಸ್ಟ್ರಿಪ್ಪರ್ 101' ಪ್ರಶಸ್ತಿ ಗೆದ್ದಿದ್ದ ಈಕೆ ಬರೀ ಮಹಿಳೆಯರೇ ಇದ್ದ ಆ ಸ್ಪರ್ಧೆಯಲ್ಲಿ ಉಡುಪು ಬಿಚ್ಚಲೇ ಇಲ್ಲ ಎಂದು ಚಿತ್ರವೇ ಹೇಳುತ್ತದೆ. ಕೇವಲ ಮಹಿಳೆಯರೇ ಇರುವಾಗ ಅದರ ಅಗತ್ಯವಾದರೂ ಎಲ್ಲಿದೆ?

ಫ್ರಾನ್ಸ್‌ನ ಐಫೆಲ್ ಟವರ್ ಬಳಿ ನೂಕುನುಗ್ಗಲು. ಪ್ರವಾಸಿಗಳು ಟವರ್ ನೋಡಿ ಕಣ್ತುಂಬಿಕೊಂಡರೆ, ಸ್ಥಳೀಯರು ಮದ್ಯದ ಗ್ಲಾಸ್ ಹಿಡಿದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ರಸ್ತೆಯಲ್ಲೇ ಕೂತು ದೊಡ್ಡ ದೊಡ್ಡ ಮದ್ಯಪಾನ ಗೋಷ್ಠಿ ಏರ್ಪಡಿಸಿ ಲೊಟ್ಟೆ ಹೊಡೆಯುವುದು ಇತ್ತೀಚಿನ ಫ್ಯಾಷನ್ನಂತೆ. ಫೇಸ್‌ಬುಕ್ ಮೂಲಕ ಇಂಥ ಪಾರ್ಟಿಗಳು ನಡೆಯುತ್ತಿವೆ. ದಾಂಧಲೆಯಿಂದ ಫೇಸ್ ಗಂಟಿಕ್ಕಿರುವ ಪೊಲೀಸರಿಗೂ ಫೇಸ್‌ಬುಕ್ ಸೇರಲು ಆಹ್ವಾನ ಬರುತ್ತಿರಬಹುದು.



ಮಳೆ, ಬಿಸಿಲು, ಚಳಿ ಎಂದೆಲ್ಲ ಹವಾಮಾನವನ್ನು ಎಷ್ಟು ಸಮಯ ಚರ್ಚಿಸಬಹುದು? ಬ್ರಿಟಿಷ್ ಮಂದಿ ತಮ್ಮ ಬದುಕಿನಲ್ಲಿ ಸರಾಸರಿ 6 ತಿಂಗಳ ಕಾಲ ಈ ಬಂತಲ್ಲ ಬೇಸಿಗೆ ಬಗ್ಗೆ ಚರ್ಚೆ ಮಾಡುತ್ತ ಕಾಲ ಕಳೆಯುತ್ತಾರಂತೆ. ಕ್ರೀಡೆ, ಪ್ರೀತಿ- ಪ್ರೇಮ, ಉದ್ಯೋಗ- ಇಂಥ ವಿಷಯಗಳೆಲ್ಲಾ ನಂತರದ ಸ್ಥಾನದಲ್ಲಿವೆ. ಆಸ್ಪತ್ರೆಯ ಬೆಡ್ ಮೇಲಿದ್ದವರನ್ನೂ 'ಹೇಗಿದೆ ಆರೋಗ್ಯ?' ಎನ್ನುವ ಬದಲು 'ಹವಾಮಾನ ಹೇಗಿದೆ?' ಎಂದು ಕೇಳುವ ಚಟ ಈ ಬ್ರಿಟಿಷರಿಗೆ.

ಇಟಲಿಯಲ್ಲಿ ಪತಿ/ ಪತ್ನಿಯನ್ನು 'ಎಕ್ಸ್' (ಮಾಜಿ) ಮಾಡಲು 'ಎಕ್ಸ್ ಫುಲ್‌ಸ್ಟಾಪ್' ಎಂಬ ವಿಚ್ಛೇದನ ಮೇಳ ನಡೆಯುತ್ತಿದೆ. ಈ ವೈದ್ಯೆಯರು ಸ್ಥಳದಲ್ಲೇ ಮಗುವಿನ ತಂದೆಯ ಡಿಎನ್‌ಎ ಪರೀಕ್ಷೆ ಮಾಡಿ 'ನೀನು ನಿಜವಾದ ತಂದೆಯಲ್ಲ, ಪತ್ನಿಗೆ ಸೋಡಾಚೀಟಿ ಕೊಡಲು ಅಡ್ಡಿಯಿಲ್ಲ' ಎಂದು ಸರ್ಟಿಫಿಕೇಟ್ ನೀಡುವ ಮಳಿಗೆ ಹಾಕಿಕೊಂಡಿದ್ದಾರಂತೆ. ನಮ್ಮಲ್ಲಿ ಸಾಲಮೇಳವಿದ್ದ ಹಾಗೆ ಎಲ್ಲವೂ ಇನ್‌ಸ್ಟಂಟ್.





ರೊಬಾಟ್ ಅನ್ನು ಪತ್ನಿಯನ್ನಾಗಿ ಮಾಡಿಕೊಂಡ ಜಪಾನೀಯರು ಈಗ ಅದನ್ನು ಮದುವೆ ನೆರವೇರಿಸುವ ಪುರೋಹಿತನನ್ನಾಗಿ ಮಾಡಿಕೊಂಡಿದ್ದಾರೆ. ಏನಾದರೂ ಹೊಸತು ಮಾಡುವ ಹುಮ್ಮಸ್ಸಿನ ಜಪಾನೀಯರ ತಲೆಗೆ ರೊಬಾಟ್ ಹೆಂಡತಿ ತರುವ ಮೊದಲೇ ಪುರೋಹಿತನನ್ನು ಸಿದ್ಧ ಮಾಡಿಟ್ಟುಕೊಳ್ಳುವ ಐಡಿಯಾ ಯಾಕೆ ಹೊಳೆಯಲಿಲ್ಲವೋ? ವಿವಾಹಕ್ಕೆ ವಿರೋಧ ಒಡ್ಡುವ ಸಂಪ್ರದಾಯ ಇರುವ ನಮ್ಮಲ್ಲೂ ರೊಬಾಟ್ ಅಪ್ಪ-ಅಮ್ಮನನ್ನು ಮಾಡಿದರೆ ಭರ್ಜರಿ ವಹಿವಾಟು ನಡೆದೀತು!

ಜರ್ಮನಿಯ ಪೋಸ್ಟ್‌ಮನ್ ಬಹುಕಾಲದ ಸಂಗಾತಿ ಸಿಸಿಲಿಯಾಳನ್ನು ಮದುವೆಯಾಗಿದ್ದಾನೆ. ಇದು ಕಾನೂನಿಗೆ ವಿರುದ್ಧ ಎಂದು ಸರ್ಕಾರ ಹೇಳಿದ್ದರಿಂದ ಟಿವಿ ನಟಿಗೆ ಹಣ ಕೊಟ್ಟು ಪೌರೋಹಿತ್ಯ ವಹಿಸಲು ಹೇಳಿದ್ದನಂತೆ. ಅಷ್ಟಕ್ಕೂ ಈ ಸಿಸಿಲಿಯಾ ಅಂಥ ಸುಂದರಿಯಾ? ಅದೊಂದು ದಢೂತಿ, ಅಸ್ತಮಾಪೀಡಿತ ಹೆಣ್ಣು ಬೆಕ್ಕು.



ದಿನಕ್ಕೊಂದು ಆಚರಣೆಗಳು. ಮೇ 17ರಂದು ಅಂತರರಾಷ್ಟ್ರೀಯ ಹೋಮೋಫೋಬಿಯ ದಿನವಂತೆ. ಸಲಿಂಗಿಗಳ ವಿರುದ್ಧ ನಡೆಯುತ್ತಿರುವ ತಾರತಮ್ಯ ಖಂಡಿಸಿ ಪ್ರಮುಖ ನಗರಗಳಲ್ಲಿ ಸಲಿಂಗಿಗಳು ಪ್ರತಿಭಟನೆ ನಡೆಸಿಯೇಬಿಟ್ಟರು. ಪಾಶ್ಚಿಮಾತ್ಯರಲ್ಲಿ ಏನೇ ಪ್ರತಿಭಟನೆ ಇರಲಿ, ಅದು ವಸ್ತ್ರಸಂಹಿತೆ ವಿರುದ್ಧವೇ. ಆದರೆ ಇವರೇಕೋ ಅದನ್ನು ಕೈಬಿಟ್ಟು ಅದರ ಮುಂದಿನ ಭಾಗವನ್ನು ಪ್ರೇಕ್ಷಕರೆದುರು ಪ್ರದರ್ಶಿಸಿದರು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65